# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1453 (1573) |
| ಸದಸ್ಯರ ಹೆಸರು | ಡಾ: ಉಮಾಶ್ರೀ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸುವ ದಿನಾಂಕ | 19/12/2025 |
| ಉತ್ತರಿಸುವ ಸಚಿವರು | ಕೃಷಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೆಳೆಗಳಿಗೆ ಸಾವಯವ ಮತ್ತು ರಾಸಾಯನಿಕ ಗೊಬ್ಬರವನ್ನು ಸರ್ಕಾರದಿಂದ ವಿತರಿಸಲಾಗುತ್ತಿದೆಯೇ; ರಾಜ್ಯದಲ್ಲಿ 2 ವರ್ಷಗಳಲ್ಲಿ ಎಷ್ಟು ಜನ ರೈತರಿಗೆ ಸಾವಯವ ಗೊಬ್ಬರ ಹಂಚಲಾಗಿದೆ; ಇದೇ ರೀತಿ ಎಷ್ಟು ಜನ ರೈತರಿಗೆ ರಾಸಾಯನಿಕ ಗೊಬ್ಬರ ಹಂಚಲಾಗಿದೆ; | ರಸಗೊಬ್ಬರಗಳ ಸಮತೋಲನಾತ್ಮಕ ಬಳಕೆಯನ್ನು ಉತ್ತೇಜಿಸಲು ರೈತರಿಗೆ ಇಲಾಖೆಯ ವಿವಿಧ ಯೋಜನೆಗಳಡಿ ರಿಯಾಯತಿ ದರದಲ್ಲಿ ಸಾವಯವ ಗೊಬ್ಬರಗಳು, ಜೈವಿಕ ಗೊಬ್ಬರಗಳು, ಹಸಿರೆಲೆ ಗೊಬ್ಬರ ಬೀಜ, ಲಘುಪೋಷಕಾಂಶಗಳು, ಜಿಪ್ಸಂ, ಕೃಷಿ ಸುಣ್ಣವನ್ನು ರೈತ ಸಂಪರ್ಕ ಕೇಂದ್ರಗಳ ಮೂಲಕ ವಿತರಿಸಲಾಗುತ್ತಿದೆ.<br>ಮುಂದುವರೆದು, ರೈತರಿಗೆ ಅತ್ಯವಶ್ಯಕವಾದ ಕೇಂದ್ರ ಸರ್ಕಾರದ ಸಬ್ಸಿಡಿಗೆ ಒಳಪಡುವ ಡಿ.ಎ.ಪಿ, ಎಂ.ಒ.ಪಿ, ಎಸ್.ಎಸ್.ಪಿ, ಕಾಂಪ್ಲೆಕ್ಸ್ ಮತ್ತು ಯೂರಿಯಾ ರಸಗೊಬ್ಬರಗಳನ್ನು ಅಧಿಕೃತ ರಸಗೊಬ್ಬರ ಮಾರಾಟ ಪರವಾನಗಿ ಹೊಂದಿರುವ ಸಹಕಾರ ಸಂಘಗಳು ಮತ್ತು ಖಾಸಗಿ ಮಾರಾಟಗಾರರ ಮೂಲಕ ರೈತರಿಗೆ ಮಾರಾಟ ಮಾಡಲಾಗುತ್ತಿದೆ.<br>ಕಳೆದ ಎರಡು ವರ್ಷಗಳಲ್ಲಿ ಸಹಾಯಧನದಡಿ ರೈತರಿಗೆ ಸಾವಯವ ಗೊಬ್ಬರ ಮತ್ತು ರಾಸಾಯನಿಕ ಗೊಬ್ಬರ ವಿತರಣೆಯಾಗಿರುವ ವಿವರ ಈ ಕೆಳಕಂಡಂತಿದೆ. |

**ಸಾವಯವ ಗೊಬ್ಬರ ಮತ್ತು ಲಘುಪೋಷಕಾಂಶಗಳನ್ನು ಖರೀದಿಸಿರುವ ರೈತರ ಸಂಖ್ಯೆ**

| ರಸಗೊಬ್ಬರದ ವಿಧ/ಗ್ರೇಡ್ | 2023-24 | 2024-25 |
|---|---|---|
| ಸಾವಯವ ಗೊಬ್ಬರ | 55894 | 63882 |
| ಲಘುಪೋಷಕಾಂಶಗಳು | 312329 | 226465 |

**ರಾಸಾಯನಿಕ ಗೊಬ್ಬರ ಖರೀದಿಸಿರುವ ರೈತರ ಸಂಖ್ಯೆ**

| ಕ್ರ.ಸಂ. | ರಸಗೊಬ್ಬರದ ವಿಧ/ಗ್ರೇಡ್ | 2023-24 | 2024-25 |
|---|---|---|---|
| 1 | ಡಿ.ಎ.ಪಿ. | 911719 | 729597 |
| 2 | ಎಮ್.ಒ.ಪಿ | 266702 | 339758 |
| 3 | ಕಾಂಪ್ಲೆಕ್ಸ್ | 1523060 | 1687661 |
| 4 | ಯೂರಿಯಾ | 1904887 | 2026799 |
| 5 | ಎಸ್.ಎಸ್.ಪಿ | 101345 | 103767 |
| | **ಒಟ್ಟು** | **4707713** | **4887582** |

| | | |
|---|---|---|
| ಆ) | ಉತ್ತಮ ಬೆಳೆಗಾಗಿ ಪ್ರಾಣಿ ಮೂಳೆ ಗೊಬ್ಬರ(Bone Meal) ಮಾರುಕಟ್ಟೆಗೆ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಗೊಬ್ಬರ ಉತ್ತಮವಾದ ಗೊಬ್ಬರವೆಂದು ವೈಜ್ಞಾನಿಕವಾಗಿ ಪರೀಕ್ಷಿಸಲಾಗುವುದೇ; | ಹೌದು, ಮೂಳೆ ಗೊಬ್ಬರ(Bone Meal)ವು ರಸಗೊಬ್ಬರ (ನಿರವಯವ, ಸಾವಯವ ಅಥವಾ ಮಿಶ್ರಿತ (ನಿಯಂತ್ರಣ) ಆದೇಶ, 1985 ರಡಿ ಅಧಿಸೂಚನೆಯಾಗಿರುತ್ತದೆ. ಸದರಿ ಆದೇಶದಲ್ಲಿ ಮೂಳೆ ಗೊಬ್ಬರ(Bone Meal)ಕ್ಕೆ ನೀಡಿರುವ ನಿರ್ದಿಷ್ಟ ಮಾನದಂಡ(Specifications) ಗಳಿಗೆ ಅಧಿಸೂಚಿತ ಪರೀಕ್ಷಾ ನಿಯತಾಂಕ (Parameters) ಗಳನ್ವಯ ಅಧಿಸೂಚಿತ ಪ್ರಯೋಗಾಲಯಗಳಲ್ಲಿ ಮಾದರಿಗಳನ್ನು ಪರೀಕ್ಷೆಗೆ ಒಳಪಡಿಸಲಾಗುತ್ತಿದೆ. |
| ಇ) | ಶ್ರಮ ಜೀವಿಯಾದ ಕತ್ತೆಯಿಂದ ಸಿಗುವ ಗಂಜಲ, ಲದ್ದಿ ಹಾಗೂ ಇತರೆ ಉತ್ಪನ್ನಗಳಿಂದ ಉತ್ತಮ ಬೆಳೆಯನ್ನು ಬೆಳೆಯಲು ಸಾಧ್ಯವೆಂದು ಮಾರುಕಟ್ಟೆಯಲ್ಲಿ ಈ ಉತ್ಪನ್ನ ಮಾರಾಟಕ್ಕೆ ಇಟ್ಟಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ? | ಅಧಿಕ ಪ್ರಮಾಣದಲ್ಲಿ ಸಾವಯವ ಗೊಬ್ಬರವನ್ನು ಉತ್ಪಾದಿಸಿ ಬ್ರಾಂಡ್ ನಡಿ ಮಾರಾಟ ಮಾಡುವುದಕ್ಕೆ ರಸಗೊಬ್ಬರ ನಿಯಂತ್ರಣ ಆದೇಶ, 1985 ರ ಪ್ರಕಾರ ಪರವಾನಗಿ ಪಡೆಯುವುದು ಕಡ್ಡಾಯವಾಗಿರುತ್ತದೆ.<br>ಶ್ರಮ ಜೀವಿಯಾದ ಕತ್ತೆಯಿಂದ ಸಿಗುವ ಗಂಜಲ, ಲದ್ದಿ ಹಾಗೂ ಇತರೆ ಉತ್ಪನ್ನಗಳಿಂದ ಅಧಿಕ ಪ್ರಮಾಣದಲ್ಲಿ ಸಾವಯವ ಗೊಬ್ಬರವನ್ನು ಉತ್ಪಾದಿಸಿ ಬ್ರಾಂಡ್ ನಡಿ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. |

ಸಂಖ್ಯೆ: AGRI/373/ACT/2025

(ಎನ್. ಚಲುವರಾಯಸ್ವಾಮಿ)
ಕೃಷಿ ಸಚಿವರು